# ಲಾ ವಿದ್ಯಾರ್ಥಿಯ ಸಿನಿಮಾ ಕನವರಿಕೆ

**ಅಂಜಲಿ ಅನೀಶ್, 'ಪದವಿಪೂರ್ವ' ಸಿನಿಮಾ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟಿದ್ದಾರೆ. ನಿರ್ದೇಶನದೊಂದಿಗೆ ನಟಿಯಾಗಿಯೂ ಸಿನಿರಂಗದಲ್ಲಿ ತಮ್ಮದೇ ಛಾಪು ಮೂಡಿಸುವ ತಯಾರಿಯಲ್ಲಿದ್ದಾರೆ.**

■ ಸುಮಲತಾ ಎನ್.



ಸಿನಿಮಾ ನಿರ್ದೇಶನದ ಕನಸನ್ನು ಕಣ್ತುಂಬಿಕೊಂಡು ಬೆಂಗಳೂರಿನಿಂದ ಮುಂಬೈ ಮುಟ್ಟಿದ ಹುಡುಗಿಗೆ ಅಚಾನಕ್ಕಾಗಿ ಸಿಕ್ಕಿದ್ದು ಜಾಹೀರಾತೊಂದರಲ್ಲಿ ನಟಿಸುವ ಅವಕಾಶ. ಆ ಒಂದು ಪುಟ್ಟ ಅವಕಾಶ, ಬೆರಗಿನ ಮಾಡೆಲಿಂಗ್ ಕ್ಷೇತ್ರದ ದಾರಿ ತೆರೆದಿಟ್ಟಿತ್ತು. ಮಾಡೆಲಿಂಗ್ ಜೊತೆಜೊತೆಗೆ ಎರಡು ಸಿನಿಮಾಗಳಿಗೆ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿದ ಅನುಭವ ಮತ್ತಷ್ಟು ವಿಶ್ವಾಸ ಮೂಡಿಸಿತ್ತು. ನಿರ್ದೇಶನ, ಮಾಡೆಲಿಂಗ್, ನಟನೆ... ಹೀಗೆ ಬಣ್ಣದ ಲೋಕದ ಎಳೆಗಳನ್ನು ಹೆಣೆಯುತ್ತಲೇ ಇದೀಗ ಕನ್ನಡ ಬೆಳ್ಳಿತೆರೆಗೆ ಕಾಲಿಟ್ಟಿದ್ದಾರೆ ಅಂಜಲಿ ಅನೀಶ್.

'ಪದವಿಪೂರ್ವ' ಸಿನಿಮಾ ಮೂಲಕ ನಟನಾ ಬದುಕಿಗೆ ಅಡಿಯಿಟ್ಟಿರುವ ಅಂಜಲಿ ಅನೀಶ್, ಬೆಂಗಳೂರಿನ ಹುಡುಗಿ. ಸದ್ಯ ಕಾನೂನು ಪದವಿ ಕಲಿಯುತ್ತಿದ್ದಾರೆ. ಸಿನಿಮಾ ನಿರ್ದೇಶನದ ಕೌಶಲಗಳನ್ನು ಅರಿತಿರುವ ಅವರು, ಕನ್ನಡದ 'ಅಂಬಿ ನಿಂಗ್ ವಯಸ್ಸಾಯ್ತೊ', ಹಿಂದಿಯ 'ಭಯ್ಯಾಜಿ ಸೂಪರ್ ಹಿಟ್' ಸಿನಿಮಾಗಳಿಗೆ ಸಹಾಯಕ ನಿರ್ದೇಶಕಿಯಾಗಿಯೂ ಕೆಲಸ ಮಾಡಿದ್ದಾರೆ.

'ಯಾವುದೇ ವಿಷಯದಲ್ಲಿ ಕಲಿಕೆ ಸ್ವತಂತ್ರ ಹಾಗೂ ಕ್ರಿಯಾಶೀಲವಾಗಿರಬೇಕು' ಎನ್ನುವ ಅಂಜಲಿ, ಏಳನೇ ತರಗತಿವರೆಗೂ ಶಾಲೆಯಲ್ಲಿ ಓದಿ ನಂತರ 'ಹೋಂ ಸ್ಕೂಲಿಂಗ್' ಮಾಡಿದವರು. ಹದಿನೈದನೇ ವಯಸ್ಸಿಗೆ ಮುಂಬೈಗೆ ಹೋಗಿ 'ಅನುಪಮ್ ಖೇರ್ ನಟನಾ ಶಾಲೆ'ಯಲ್ಲಿ ಡಿಪ್ಲೊಮಾ ತರಗತಿಗೆ ಸೇರಿಕೊಂಡರು. ಶಾಲಾ ಶಿಕ್ಷಣ ರುಚಿಸದ ಅವರಿಗೆ ಸೃಜನಶೀಲವಾದ ನಿರ್ದೇಶನದ ಪಾಠವೆಂದರೆ ಅಪಾರ ಆಸಕ್ತಿ. ಅಲ್ಲಿಯೇ ತಮ್ಮ ನಟನಾ ಕೌಶಲವನ್ನೂ ಒರೆಗೆ ಹಚ್ಚಿ ನೋಡಿದರು. ಇವರ ಅಭಿನಯಕ್ಕೆ ಶಹಬ್ಬಾಸ್‌ಗಿರಿ ಸಿಕ್ಕಿದ್ದು ಅಭಿನಯದ ಆಸೆಗೆ ನೀರೆರೆದಿತ್ತು. ಹದಿನೇಳನೇ ವಯಸ್ಸಿಗೆ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಲು ಆರಂಭಿಸಿದರು.

'ಮುಂಬೈನಲ್ಲಿ ಸಿನಿಮಾ ನಿರ್ದೇಶನಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಕಲಿತುಕೊಂಡೆ. ಅದೇ ಸಮಯದಲ್ಲಿ ಮಾಡೆಲಿಂಗ್ ಅವಕಾಶವೂ ಬಂದಿತ್ತು. ಹುಡುಗನ ರೀತಿಯೇ ಬೆಳೆದವಳು ನಾನು. ರಫ್ ಅಂಡ್ ಟಫ್ ಆಗಿದ್ದೆ. ನಟಿಯರಂಥ ಮೈಮಾಟ ಕೂಡ ನನಗಿರಲಿಲ್ಲ. ಹೀಗಾಗಿ ನನ್ನ ದೇಹವನ್ನು ಸಾಕಷ್ಟು ತಿದ್ದಿತೀಡಿದೆ. ಹಲವು ಕಸರತ್ತುಗಳನ್ನು ಮಾಡಿದೆ. ಇದೊಂದು ದೊಡ್ಡ ಪರಿವರ್ತನೆಯೇ ಆದಂತಿತ್ತು. ಎರಡು ವರ್ಷಗಳ ಅವಧಿಯಲ್ಲಿ ಹಲವು ಬ್ರ್ಯಾಂಡ್‌ಗಳಿಗೆ ರೂಪದರ್ಶಿಯಾದೆ. ಜೊತೆಗೆ ಜಾಹೀರಾತು ಏಜೆನ್ಸಿಯೊಂದರಲ್ಲಿ ಸಹಾಯಕ ಸಂಪಾದಕಿಯಾಗುವ ಅವಕಾಶವನ್ನೂ ಕಲಿಕೆಯಾಗಿ ಮಾರ್ಪಾಡು ಮಾಡಿಕೊಂಡೆ' ಎಂದು ತಮ್ಮ ಸಿನಿಮಾ ನಂಟಿನ ಮೊದಲ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ ಅವರು.

ಬೆಂಗಳೂರಿಗೆ ವಾಪಸಾದ ನಂತರ ನಿರ್ದೇಶಕ ಯೋಗರಾಜ್ ಭಟ್ ಅವರ ಬಳಿ, ಸಹಾಯಕ ನಿರ್ದೇಶಕಿಯಾಗುವ ತಮ್ಮ ಕನಸನ್ನು ತೆರೆದಿಟ್ಟರು ಅಂಜಲಿ. 'ನೀನು ಹೀರೋಯಿನ್ ಆಗಬಹುದಲ್ಲ' ಎಂಬ ಅವರ ಸಲಹೆ ಅಂಜಲಿಯವರಲ್ಲಿದ್ದ ನಟನಾಸಕ್ತಿಯನ್ನು ಹುರಿದುಂಬಿಸಿತ್ತು. ಆರು ತಿಂಗಳ ಸಮಯದಲ್ಲಿ ಷಿಕಾಗೋದ 'ಸೆಕೆಂಡ್ ಸಿಟಿ' ನಟನಾ ಶಾಲೆಯಲ್ಲಿ ತರಬೇತಿ ಪಡೆದ ನಂತರ ನಟನೆಯನ್ನು ಗಂಭೀರವಾಗಿ ತೆಗೆದುಕೊಳ್ಳುವ ನಿರ್ಧಾರ ಮಾಡಿದರು.

ಅಮೆರಿಕದಿಂದ ವಾಪಸಾಗುತ್ತಿದ್ದಂತೆ ಕೊರೊನಾ ಲಾಕ್‌ಡೌನ್ ಕೆಲ ಸಮಯವನ್ನು ಸ್ಥಗಿತಗೊಳಿಸಿತ್ತು. ತೆಲುಗು ಸಿನಿಮಾವೊಂದರಲ್ಲಿ ಅವಕಾಶ ಸಿಕ್ಕಿದರೂ

